
# ನಿದಿರೆ ಅಪ್ಪಿಕೊ ನನ್ನ...



ನನ್ನವಳ ಬಳಿಗೆ ಹೋಗುವ ಸಮಯವಾಯಿತು.
ಕಾದು ಕೂತಿರುವ ಅವಳಿಗೆ ಕೋಪ ಮೂಗಿನ ಮೇಲೆಯೆ...
ಕೋಪದಲ್ಲಿ ಕೆಂಪಾಗುವ ಅವಳ ಮೂಗು ಚಂದವೊ
ಅವಳ ಮೂಗುತಿ ಚಂದವೊ ಅರಿಯೆ ನಾ...
ಬಾ ನಿದಿರೆಯೆ ...
ನನ್ನವಳು ಕೋಪದಲಿ ಮುಖ ತಿರುಗಿಸಿ
ಕೆನ್ನೆಯುಬ್ಬಿಸಿಕೊಂಡು ಮಗುವಂತೆ ಕಾಣುವಳು...
ಅಪ್ಪಿಕೊಂಡು ಹಣೆಗೆ ಮುತ್ತನಿಟ್ಟಾಗಲೆ ಅವಳು ನಗುವುದು.

ಕಾಯಿಸಬೇಡ ನಿದಿರೆಯೆ...
ಕಾಯುವ ಕಷ್ಟ ನಿನಗೇನು ಗೊತ್ತು.
ನನ್ನವಳು ನನಗಾಗಿ ದಿನವಿರುಳು ಕಾಯುತಿರುವಳು...
ಕನಸಿನ ದಾರಿಯಲ್ಲಿ ನನ್ನವಳ ಬಳಿ ಸಾರಲು ತಡವಾಗುತಿದೆ
ಬೇಗ ಬಾ ನಿದಿರೆಯೆ... ನನ್ನವಳಿಗೆ ಕೋಪದ ಜಾಗದಲ್ಲಿ ನಿರಾಸೆಯ
ಕಣ್ಣೀರು ಬರುವ ಮುಂಚೆ ಅವಳಿರುವಲ್ಲಿಗೆ ನನ್ನ ಸೇರಿಸು
ಅವಳ ಕಣ್ಣೀರು ನನ್ನ ಉಸಿರ ನಿಲ್ಲಿಸುವುದು
ಬಾಡಿದ ಮೊಗದಾವರೆಯ ನಾ ನೋಡಲಾರೆ
ತಾಳಲಾರೆ ಬಾ ಬೇಗ ನಿದಿರೆಯೆ
ನನ್ನವಳ ನಗು ಬಿದಿಗೆಯ ಚಂದ್ರನಂತೆ
ಬೆಂದ ಹೃದಯಕೆ ತಂಪನಿಯುವುದು.
ಅವಳ ಮಡಿಲಲಿ ಮಲಗಿ ಅವಳ ಮುಂಗುರುಳಲಿ
ಆಟವಾಡುವ ಬಯಕೆಯಾಗುತಿದೆ...
ಅವಳ ನಸುಕೋಪದ ಕೆಂಪು ಕೆನ್ನೆಯನ್ನು
ನೋಡುವ ಮನಸಾಗುತಿದೆ...
ನನ್ನ ಪ್ರೀತಿಯ ಸಾಯಿಸಬೇಡ ಬೇಗ ಬಾ ನಿದಿರೆಯೆ
ಅವಳು ನನಗೆ ಸಂಜೀವಿನಿ
ಸತ್ತ ದೇಹಕೆ ಉಸಿರ ತುಂಬಿದ ದೇವತೆ
ಅವಳಿರದೆ ಬಾಳಲಾರೆ ನಿಮಿಷವೊಂದು ನಾನು
ಸಾಯುವಾಗಲು ಅವಳ ಮಡಿಲಲ್ಲಿ ಅವಳ ಮುಖ ನೋಡುವೆ

ಬಾ ಬಾ ನಿದಿರೆ
ನನ್ನ ಕಣ್ಣ ಎದುರೆ

● ಚಾಂಗದೇವ ಮೋರಕರ